

‘ಮಹಾನಟಿ’ ಕಾರ್ಯಕ್ರಮದಿಂದ ಕನ್ನಡ ಕಿರುತೆರೆ ಪ್ರವೇಶಿಸಿದ್ದ ಧನ್ಯಶ್ರೀ ಸುಜಿತ್, ‘ಹುಬ್ಬಳ್ಳಿ ಹಂಟರ್ಸ್’ ಸಿನಿಮಾ ಮೂಲಕ ಪ್ರೇಕ್ಷಕರನ್ನು ರಂಜಿಸಲು ಹೊರಟಿದ್ದಾರೆ.

ಅಪ್ಪನ ಪ್ರೋತ್ಸಾಹವೇ ಎಲ್ಲದಕ್ಕೂ ಕಾರಣ’ ಎಂದು ಸ್ಮರಿಸುತ್ತಾರೆ. ಕಿರುತೆರೆಗೆ ಬಂದು ಎರಡೂವರೆ ವರ್ಷಗಳ ನಂತರ ಸಿನಿಮಾ ಅವಕಾಶ ದೊರೆತಿದ್ದು, ಒಳ್ಳೆಯ ತಂಡದ ಜೊತೆಗೆ ಕೆಲಸ ಆರಂಭಿಸಿರುವ ಖುಷಿಯಲ್ಲಿದ್ದಾರೆ. ಇದಕ್ಕೆ ಅಡಿಪಾಯವಾದ ಕಿರುತೆರೆಯ ಅನುಭವಗಳನ್ನೂ ತೆರೆದಿಟ್ಟಿದ್ದಾರೆ.

‘ಕಿರುತೆರೆ ರೋಲರ್ ಕೋಸ್ಟರ್‌ನಂತಿತ್ತು. ನಿರಂತರ ಪ್ರಯತ್ನ ಇಲ್ಲಿ ಅತ್ಯಗತ್ಯ. ಯಾವುದೂ ಅಷ್ಟು ಸುಲಭವಾಗಿ ಸಿಗುವುದಿಲ್ಲವಲ್ಲ, ಪ್ರಯತ್ನಪಡುತ್ತಾ ಇದ್ದರೆ ಒಂದಲ್ಲಾ ಒಂದು ದಿನ ಅವಕಾಶ ಸಿಕ್ಕೇ ಸಿಗುತ್ತದೆ. ಕಿರುತೆರೆ, ಸ್ಥಿರತೆ ಕಾಯ್ದುಕೊಳ್ಳುವುದನ್ನು ಕಲಿಸಿಕೊಟ್ಟಿದೆ. ಶೋಗಳು ನಟನೆಗೆ ಇನ್‌ಪುಟ್‌ಗಳನ್ನು ನೀಡಿವೆ. ನಾನು ನಟನಾ ತರಬೇತಿಗೆ ಹೋದವಳಲ್ಲ. ಕಿರುತೆರೆಯೇ ನನ್ನ ಮೊದಲ ನಟನಾ ತರಗತಿಯಾಯಿತು’ ಎಂದು ಮಾತು ಪೋಣಿಸಿದ್ದಾರೆ.

‘ಹುಬ್ಬಳ್ಳಿ ಹಂಟರ್ಸ್’ ಸಿನಿಮಾದಲ್ಲಿ ಪ್ರಮುಖ ಪಾತ್ರವನ್ನು ನಿಭಾಯಿಸುತ್ತಿರುವ ಧನ್ಯಶ್ರೀ ಅವರಲ್ಲಿ ತಮ್ಮ ಪಾತ್ರದ ಬಗ್ಗೆ ಖುಷಿ, ಕುತೂಹಲ ಎರಡೂ ತುಂಬಿದೆ. ‘ಈ ಸಿನಿಮಾದಲ್ಲಿ ಎಲ್ಲರೂ ಪ್ರಮುಖರೇ. ಪ್ರತಿಯೊಬ್ಬರದ್ದೂ ವಿಶೇಷತೆಯಿದೆ. ನನ್ನ ಪಾತ್ರವನ್ನೂ ಅದ್ಭುತವಾಗಿ ಬರೆಯಲಾಗಿದೆ. ನೋಡುವವರಿಗೆ ಖುಷಿಯಾಗುತ್ತದೆ, ಅಂಥ ಪಾತ್ರ. ನನ್ನ ಪ್ರತಿಭೆಯನ್ನು ತೋರಲು ಇದು ಉತ್ತಮ ಅವಕಾಶ’ ಎಂದು ಉತ್ಸಾಹ ತುಂಬಿ ಹೇಳುತ್ತಾರೆ. ‘ಈ ಸಿನಿಮಾದಲ್ಲಿ ಮನರಂಜನೆ ತುಂಬಿ ತುಳುಕುತ್ತದೆ. ಹುಚ್ಚರಾಗುವಷ್ಟು ನಗು ಕೊಡುತ್ತದೆ, ಸ್ವಲ್ಪ ಭಯವನ್ನೂ ಹುಟ್ಟಿಸುತ್ತದೆ’ ಎಂದು ಸಿನಿಮಾ ಬಗ್ಗೆ ಸುಳಿವನ್ನೂ ನೀಡಿದ್ದಾರೆ. ಮುಂದೆ ದ್ವಿಪಾತ್ರ–ತ್ರಿಪಾತ್ರಗಳಿರುವ, ಪ್ರಯೋಗಗಳಿಗೆ ತೆರೆದುಕೊಳ್ಳುವಂಥ ಪಾತ್ರಗಳಲ್ಲಿ ತಮ್ಮನ್ನು ನೋಡಿಕೊಳ್ಳುವ ಹಂಬಲ ಅವರದ್ದು.

‘ಎಲ್ಲದಕ್ಕೂ ಸಮಯ ಹಿಡಿಯುತ್ತದೆ. ಯಾವುದೇ ಕೆಲಸ ಆಗಲಿ, ಎಲ್ಲದಕ್ಕೂ ಒಂದು ಪ್ರಕ್ರಿಯೆ ಇರುತ್ತದೆ. ನಮ್ಮಲ್ಲಿ ಪ್ರತಿಭೆ, ಪರಿಶ್ರಮ ಇದ್ದರೆ ಖಂಡಿತ ಬೆಂಬಲ ಸಿಗುತ್ತದೆ’ ಎಂದು ಭರವಸೆಯನ್ನೂ ವ್ಯಕ್ತಪಡಿಸುತ್ತಾರೆ.

## ಕನ್ನಡಕ್ಕೆ ‘ಡ್ಯೂಡ್’ ಐಶ್ವರ್ಯಾ

ತಮಿಳಿನ ‘ಡ್ಯೂಡ್’ ಸಿನಿಮಾ ಖ್ಯಾತಿಯ ನಟಿ ಐಶ್ವರ್ಯಾ ಶರ್ಮಾ ಕನ್ನಡ ಸಿನಿಮಾರಂಗಕ್ಕೆ ಕಾಲಿಡುತ್ತಿದ್ದಾರೆ. ಶಾನ್ವಿ ಎಂಟರ್‌ಟೇನ್ಮೆಂಟ್‌ನ ನಾಲ್ಕನೇ ಪ್ರೊಡಕ್ಷನ್ ಸಿನಿಮಾ ಇದಾಗಿದ್ದು, ಈ ಮೂಲಕ ಕನ್ನಡ ಪ್ರೇಕ್ಷಕರಿಗೆ ಪರಿಚಿತರಾಗುವ ತಯಾರಿಯಲ್ಲಿದ್ದಾರೆ ಐಶ್ವರ್ಯಾ.

ಲಿಯೊ, ಈ ಸಿನಿಮಾದ ನಿರ್ದೇಶನದ ಜವಾಬ್ದಾರಿ ಹೊತ್ತಿದ್ದು, ರವೀಶ್ ಆರ್.ಸಿ. ಸ್ಕ್ರೀನ್‌ಪ್ಲೇ ಚಿತ್ರಕ್ಕಿದೆ. ನಟ ಪ್ರಜ್ವಲ್ ದೇವರಾಜ್ ಅಭಿನಯದ ‘ರಾಕ್ಷಸ’ ಸಿನಿಮಾ ನಿರ್ಮಾಣ ಮಾಡಿದ್ದ ದೀಪು ಬಿ.ಎಸ್. ಅವರು ಪ್ರೊಡಕ್ಷನ್ ಹೊಣೆ ಹೊತ್ತಿದ್ದಾರೆ.

ಪ್ರದೀಪ್ ರಂಗನಾಥನ್ ಪ್ರಮುಖ ಪಾತ್ರದಲ್ಲಿದ್ದ ‘ಡ್ಯೂಡ್’ನಲ್ಲಿ ಮಮಿತಾ ಬೈಜು ಹಾಗೂ ಐಶ್ವರ್ಯಾ ನಟಿಸಿದ್ದರು. ಸಿನಿಮಾ ಬಹಳ ಸದ್ದು ಮಾಡಿತ್ತು. ಇದೇ ಫೆಬ್ರುವರಿಯಲ್ಲಿ ಕನ್ನಡದ ಈ ಹೊಸ ಸಿನಿಮಾ ಪ್ರಾಜೆಕ್ಟ್ ಶುರುವಾಗಲಿದ್ದು, ಕಲಾವಿದರ ಆಯ್ಕೆ ಪ್ರಕ್ರಿಯೆ ಸಾಗುತ್ತಿದೆ.





## ಕ್ರೈಮ್ ಥ್ರಿಲ್ಲರ್ ಚಿತ್ರದಲ್ಲಿ ದಿಗಂತ್

ಈಚೆಗೆ ‘ಎಡಗೈಯೇ ಅಪಘಾತಕ್ಕೆ ಕಾರಣ’ ಸಿನಿಮಾದಲ್ಲಿ ತಮ್ಮ ನಟನೆಗೆ ಶಹಭಾಸ್‌ಗಿರಿ ಪಡೆದುಕೊಂಡಿದ್ದ ನಟ ದಿಗಂತ್ ಮಂಚಾಲೆ, ಕನ್ನಡದೊಂದಿಗೆ ಪರಭಾಷೆಯಲ್ಲಿಯೂ ತಮ್ಮ ವ್ಯಾಪ್ತಿ ವಿಸ್ತರಿಸಿಕೊಳ್ಳುತ್ತಿದ್ದಾರೆ.

ತೆಲುಗು ಭಾಷೆಯಲ್ಲಿ ನಟಿ ಸಮಂತಾ ಜೊತೆಗೆ ತೆರೆಹಂಚಿಕೊಂಡಿದ್ದು, ‘ಮಾ ಇಂಟಿ ಬಂಗಾರಂ’ ಸಿನಿಮಾದಲ್ಲಿ ನಟಿಸಿದ್ದಾರೆ. ಸದ್ಯ ಆ ಸಿನಿಮಾ ಬಿಡುಗಡೆ ಮೇಲೆ ಅಭಿಮಾನಿಗಳು ಕಣ್ಣು ನೆಟ್ಟಿರುವ ನಡುವೆಯೇ ಮತ್ತೊಂದು ಸಿನಿಮಾಗೆ ದಿಗಂತ್ ಸಹಿ ಹಾಕಿದ್ದಾರೆ.

ಈ ಬಾರಿ ಕ್ರೈಂ ಹಾಗೂ ಕೌಟುಂಬಿಕ ಭಾವನೆಗಳನ್ನೊಳಗೊಂಡ ಥ್ರಿಲ್ಲರ್ ಕಥೆಯ ಮೂಲಕ ಪ್ರೇಕ್ಷಕರ ಮುಂದೆ ಬರಲು ಅಣಿಯಾಗಿದ್ದಾರೆ. ಭಾವನಾತ್ಮಕ ಕಥೆಗಳ ಹೆಣಿಗೆಯಲ್ಲಿ ಹೆಸರು ಮಾಡಿರುವ ಗೋಪಿ ರಮೇಶ್ ಅವರು ಈ ಸಿನಿಮಾ ನಿರ್ದೇಶಿಸುತ್ತಿದ್ದಾರೆ. ಈ ಹಿಂದೆ ಸಿಂಪಲ್ ಸುನಿ ನಿರ್ದೇಶನದ ‘ಸಿಂಪಲ್ಲಾಗ್ ಒಂದ್ ಲವ್ ಸ್ಟೋರಿ’ ಸಿನಿಮಾವನ್ನು ತೆಲುಗಿಗೆ ರೀಮೇಕ್ ಮಾಡಿದ್ದ ಗೋಪಿ ರಮೇಶ್, ಕನ್ನಡದಲ್ಲಿ ‘ಯಾರಿಗೆ ಬೇಕು ಈ ಲೋಕ’ ಸಿನಿಮಾ ನಿರ್ದೇಶಿಸಿದ್ದಾರೆ. ಈ ಸಿನಿಮಾ ಕೂಡ ಬಿಡುಗಡೆಯಾಗಬೇಕಿದೆ. ಇದೇ ಮೊದಲ ಬಾರಿ ದಿಗಂತ್ ಅವರೊಂದಿಗೆ ಜೊತೆ ಕೈಜೋಡಿಸಿದ್ದು, ಕನ್ನಡ ಹಾಗೂ ತೆಲುಗು ಎರಡೂ ಭಾಷೆಯಲ್ಲಿ ಸಿನಿಮಾ ಬಿಡುಗಡೆಯಾಗಲಿದೆ.